# ಶ್ರೀರಾಮಕೃಷ್ಣರ ಅಂತ್ಯಲೀಲೆ

ಸ್ವಾಮಿ ಪ್ರಭಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

### ಸೋಮವಾರ, ೨೮ ನೇ ಸೆಪ್ಟೆಂಬರ್ ೧೮೮೫

**ಬೆಳಿಗ್ಗೆ** ೯.೩೦ಕ್ಕೆ ಮಾಸ್ಟರ್ ಮಹಾಶಯರು ಸ್ಕೂಲಿಗೆ ಹೋಗುವಾಗ ರಾಮಕೃಷ್ಣರನ್ನು ಕಾಣಲು ಬಂದಿದ್ದಾರೆ....

ಶ್ರೀರಾಮಕೃಷ್ಣರು ಸಾಧನೆಯನಂತರ ತಮಗೆ ಅನಂತದ ಅನುಭವವಾದಾಗ ಕರ್ಮಗಳು ತಾವಾಗಿಯೇ ಬಿದ್ದುಹೋದ ವಿಚಾರವನ್ನು ಸೂಚಿಸುತ್ತಾ ಹೇಳುತ್ತಿದ್ದಾರೆ : "ಮೊದಮೊದಲು (ಸಂಪ್ರದಾಯಸ್ಥ ಬ್ರಾಹ್ಮಣರಂತೆ ಸ್ನಾನದ ನಂತರ) ಬಿಲ್ವದ ಎಲೆಯನ್ನು ಹಾಗೂ ಜಗನ್ನಾಥ ದೇವರ ಒಣಗಿಸಿದ ಪ್ರಸಾದ ವನ್ನು ತಿನ್ನಲೇಬೇಕಾಗುತ್ತಿತ್ತು. ಈಗ ಅದೆಲ್ಲಾ ಇಲ್ಲ. ಈಗ (ಈ ಶರೀರ) ಒಂದು ಚೀಲ ಮಾತ್ರ ಎನ್ನುವುದನ್ನು ಪ್ರತ್ಯಕ್ಷ ವಾಗಿ ಕಾಣುತ್ತಿದ್ದೇನೆ."

ಗಿರೀಶ್‌ಘೋಷ್, ಕಾಳಿಪದಘೋಷ್ ಹಾಗೂ ಇನ್ನೂ ಕೆಲವರು ಕೋಣೆಯೊಳಗೆ ಬಂದರು. ತಮ್ಮ ಕಾಯಿಲೆ ಗುಣ ವಾಗಲಿ ಎಂದು ಶ್ರೀರಾಮಕೃಷ್ಣರು ಒಮ್ಮೆ ಇಚ್ಛೆಪಟ್ಟರೆ ಸಾಕು ಅವರು ಈ ರೋಗದಿಂದ ಮುಕ್ತರಾಗುತ್ತಾರೆ, ಎಂದು ಗಿರೀಶನ ದೃಢ ವಿಶ್ವಾಸ. ಹೇಗಾದರೂ ಮಾಡಿ ಅವರಿಂದ ಈ ಮಾತನ್ನು ಹೊರಡಿಸಲು ಆತ ಈಗ ಪ್ರಯತ್ನ ಮಾಡುತ್ತಿದ್ದಾನೆ.

ಕಳೆದ ದಿವಸ ಬಂದಿದ್ದ ವೈಷ್ಣವ ಬಾಬಾಜಿಯ ಅಭಿಪ್ರಾಯ ವನ್ನು ಉಲ್ಲೇಖಿಸುತ್ತ ಗಿರೀಶ್ ರಾಮಕೃಷ್ಣರಿಗೆ ಹೇಳಿದನು : "ಆ ವೈಷ್ಣವ ನಿನ್ನೆ ಹೇಳಿದಂತೆ ಆಯುರ್ವೇದದ ಚಿಕಿತ್ಸೆಯೇ ಒಳ್ಳೆಯದು. ಈ ಕಾಯಿಲೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಒಂದು ಸಲ ಹೇಳಿಬಿಡಿ. ಕೃಷ್ಣನಿಗೆ ಒಮ್ಮೆ ಜ್ವರ ಬಂದಿತ್ತು. ಆಗ ಅವನೇ ವೈದ್ಯರೂಪದಲ್ಲಿ ನಿಂತು ತನ್ನ ಚಿಕಿತ್ಸೆಯನ್ನು ತಾನೇ ಮಾಡಿಕೊಂಡನು. ಅವಹೇಳಿತನಾದ ಒಬ್ಬ ಬ್ರಾಹ್ಮಣನ ಮರ್ಯಾದೆಯನ್ನು ಕಾಪಾಡಲು ಚೈತನ್ಯದೇವ ತಾನೇ ಜ್ವರ ಬರಿಸಿಕೊಂಡು ಬ್ರಾಹ್ಮಣನ ಪಾದೋದಕವನ್ನು ಕುಡಿದು ಜ್ವರ ದಿಂದ ಮುಕ್ತನಾದನು. ಪಾಪಿಗಳ ಉದ್ಧಾರಕ್ಕಂದೇ ನೀವು ಈ ಕಷ್ಟವನ್ನು ಅನುಭವಿಸುತ್ತಿದ್ದೀರಿ."

ಇಷ್ಟೊಂದು ರೀತಿಯಲ್ಲಿ ಬೇಡಿಕೊಂಡರೂ ಶ್ರೀರಾಮಕೃಷ್ಣ ರಿಂದ ಯಾವುದೇ ಉತ್ತರ ಬರುತ್ತಿಲ್ಲದಿರುವುದನ್ನು ನೋಡಿ, ಗಿರೀಶ್ ಮಾಸ್ಟರಿಗೆ ಹೇಳಿದನು : "ಹಲಧಾರಿ ಹೇಳುತ್ತಿದ್ದನಲ್ಲಾ, ಒಂದು ಗಿಡದ ವಿಚಾರ—'ಅದು ಏನೆಂದು ಯಾರಿಗೂ ತಿಳಿಯ ದಂತೆ' "—(ರಾಮಕೃಷ್ಣರನ್ನು ಅರ್ಥಮಾಡಿಕೊಳ್ಳುವುದು ಕಷ್ಟ ಎಂದು ಸೂಚಿಸುತ್ತಿದ್ದಾನೆ.)

ಇದೇ ದಿನವೇ ಕೆಲವು ಪ್ರಸಿದ್ಧ ಆಯುರ್ವೇದದ ವೈದ್ಯರು ರಾಮಕೃಷ್ಣರನ್ನು ಪರೀಕ್ಷಿಸಲು ಬಂದಿದ್ದರು. ಶಾರದಾನಂದರು ಬರೆಯುತ್ತಾರೆ : "ಇನ್ನು ಸಮಯವನ್ನು ನಷ್ಟ ಮಾಡುವುದು ಒಳ್ಳೆಯದಲ್ಲವೆಂದು ಯೋಚಿಸಿ ಭಕ್ತರು ಕಲ್ಕತ್ತದ ಕೆಲವು ಹೆಸರುವಾಸಿ ವೈದ್ಯರನ್ನು ರಾಮಕೃಷ್ಣರ ಬಳಿ ಕರೆತಂದು ಕಾಯಿಲೆಯ ಬಗ್ಗೆ ಅವರುಗಳ ಅಭಿಪ್ರಾಯವನ್ನು ತಿಳಿಯಲೆತ್ನಿಸಿ ದರು. ಗಂಗಾಪ್ರಸಾದ್, ಗೋಪಿಮೋಹನ, ದ್ವಾರಕಾನಾಥ, ನವ ಗೋಪಾಲ ಮುಂತಾದ ವೈದ್ಯರು ಆ ದಿನ ಅವರನ್ನು ಪರೀಕ್ಷಿಸಿ ಅವರ ಕಾಯಿಲೆಯನ್ನು 'ರೋಹಿಣಿ' ಎಂಬ ವ್ಯಾಧಿ ಎಂದು ಗುರುತಿಸಿ, ಯಾವ ಚಿಕಿತ್ಸೆಗೂ ಅದು ಬಗ್ಗದು ಎಂಬ ನಿರ್ಧಾರಕ್ಕೆ ಬಂದರು. ಹೊರಡುವ ಸಮಯದಲ್ಲಿ ಗಂಗಾಪ್ರಸಾದ್ ಒಬ್ಬ ಭಕ್ತನಿಗೆ ಹೇಳಿದನು : '(ಅಲೋಪತಿ) ಡಾಕ್ಟರುಗಳು ಯಾವ ರೋಗಕ್ಕೆ "ಕ್ಯಾನ್ಸರ್" ಎನ್ನುತ್ತಾರೆಯೋ ಅದೇ ಈ "ರೋಹಿಣಿ". ಶಾಸ್ತ್ರದಲ್ಲಿ ಇದರ ಚಿಕಿತ್ಸೆಯ ವರ್ಣನೆ ಇದ್ದರೂ ಇದು ಗುಣ ಮಾಡಲು ಆಗದಂಥ ಕಾಯಿಲೆ.' "

ಆ ದಿವಸ ಸಂಜೆ ನಾಲ್ಕುವರೆ ಗಂಟೆಗೆ ಮಾಸ್ಟರ್ ಸ್ಕೂಲಿ ನಿಂದ ಬಲರಾಮನ ಮನೆಗೆ ಬಂದರು. ರಾಮಕೃಷ್ಣರು ಪೂರ್ಣ ನನ್ನು ಕಾಣಲು ಕಾತುರರಾಗಿರುವುದನ್ನು ಮಾಸ್ಟರ್ ಆತನಿಗೆ ತಿಳಿಸಿ ಒಮ್ಮೆ ಬಂದು ಅವರನ್ನು ಕಾಣಲು ಹೇಳಿದ್ದರು. ಈಗ ಈ ವಿಚಾರವನ್ನು ರಾಮಕೃಷ್ಣರ ಎದುರು ಎತ್ತಿದರು : "ಪೂರ್ಣ ಇಲ್ಲಿಗೆ ಬರಬೇಕೆಂದುಕೊಂಡಿದ್ದಾನೆ. ಅವನ ಮನೆಯ ಜನ..." ರಾಮಕೃಷ್ಣರದ್ದು ಬಾಲಕನ ಸ್ವಭಾವ. ಅವರು ಮಾಸ್ಟರರ ಮಾತುಗಳಿಗೆ ಮನಸ್ಸು ಕೊಡುತ್ತಿಲ್ಲ. ಡಾ. ಪ್ರತಾಪ ಬರುವುದು ತಡವಾಗುತ್ತಿರುವುದನ್ನು ನೋಡಿ ಚಂಚಲರಾಗಿಬಿಟ್ಟಿದ್ದಾರೆ.

ಇದ್ದಕ್ಕಿದ್ದಂತೆ ಪೂರ್ಣ ಕೋಣೆಯೊಳಗೆ ಬಂದನು. ಅವನ ಶರೀರದಲ್ಲಿ ಬೆವರು ಇಳಿಯುತ್ತಿದೆ. ತಮ್ಮ ಸಮೀಪಕ್ಕೆ ಈ ರೀತಿ ಪೂರ್ಣ ಬಂದಾಗ ಶ್ರೀರಾಮಕೃಷ್ಣರು ತಮ್ಮ ವಸ್ತ್ರದಿಂದ ಆತನ ಶರೀರದ ಬೆವರನ್ನು ಒರೆಸಿದರು. ಅವರು ಆತನ ಹೆಗಲ ಮೇಲೆ ತಮ್ಮ ಎಡಗೈಯನ್ನು ಇಟ್ಟು ನಿಂತಿದ್ದಾರೆ. ಕಣ್ಣಿನಿಂದ ನೀರು ಸುರಿಯುತ್ತಿದೆ. ಹಾಗೆಯೇ ಅವರ ಶರೀರ ಸ್ಥಿರ ವಾಯಿತು. ಚಿತ್ರದಲ್ಲಿ ಬರೆದಿಟ್ಟ ಮೂರ್ತಿಯಂತೆ ನಿಶ್ಚಲವಾಗಿ ನಿಂತಿದ್ದಾರೆ.

ಈ ದೃಶ್ಯವನ್ನು ಕಂಡ ಮಾಸ್ಟರ್ ಮಹಾಶಯರಿಗೆ ಮಹಾ ಭಾರತದ ಒಂದು ಘಟನೆಯ ನೆನಪಾಯಿತು. ಶ್ರೀಕೃಷ್ಣನ ಲೀಲೆ

ಕೊನೆಯಾಗುವ ಹಂತದಲ್ಲಿದೆ. ಆತ ದ್ವಾರಕೆಗೆ ಹಿಂತಿರುಗುತ್ತಿದ್ದಾನೆ. ಸಾರಥಿ ರಥವನ್ನು ತಂದು ನಿಲ್ಲಿಸಿಕೊಂಡಿದ್ದಾನೆ. ಪಾಂಡವರು ಕೈಮುಗಿದು ಹನಿಮುಂಬಿದ ಕಣ್ಣುಗಳಿಂದ ಕೃಷ್ಣನ ಮುಖವನ್ನು ಅಂತಿಮವಾಗಿ ವೀಕ್ಷಿಸುತ್ತಿದ್ದಾರೆ. ದುಃಖ ವಿಷಾದದಿಂದ ತುಂಬಿದ ಹೃದಯರಾಗಿ ಮೂಕರಾಗಿ ನಿಂತಿದ್ದಾರೆ. ಶ್ರೀಕೃಷ್ಣ ಪ್ರತಿಯೊಬ್ಬರ ಬಳಿಯೂ ಹೋಗಿ ನಿಂತು ಬೀಳ್ಕೊಡುತ್ತಾ ಕೊನೆಯಲ್ಲಿ ರಥವನ್ನು ಏರಿದನು....

ಶ್ರೀರಾಮಕೃಷ್ಣರು ತಮ್ಮ ಭಾವವನ್ನು ಹತೋಟಿಗೆ ತರಲು ಮಾತನಾಡುತ್ತಿದ್ದಾರೆ. ಅವರು ರಾಖಾಲನತ್ತ ತಿರುಗಿ, "ಇವನ ಹೆಸರು ಪೂರ್ಣ" ಎಂದು ಪರಿಚಯ ಮಾಡಿದರು. ಅವರು ತಮ್ಮ ಎದೆಯ ಮೇಲೆ ಕೈಯಿಟ್ಟು ಮಾಸ್ಟರಿಗೆ ಹೇಳುತ್ತಿದ್ದಾರೆ, "ಮನಸ್ಸಿಗೆ ತುಂಬ ಕಷ್ಟವಾಗುತ್ತಿದೆ" ಎಂದು. ಪೂರ್ಣನದು ಸುಲಕ್ಷಣವಾದ ಮುಖಮಂಡಲ. ಆತನ ಕಣ್ಣುಗಳನ್ನು ನೋಡಿ ಶ್ರೀರಾಮಕೃಷ್ಣರು ಹೇಳಿದರು, "ಇವನೊಳಗಿನ ಚೈತನ್ಯ ಈ ಕಣ್ಣುಗಳಲ್ಲಿ ಪ್ರಕಾಶಿಸುತ್ತಿದೆ" ಎಂದು. ಪೂರ್ಣನಿಗೆ ಸಿಹಿತಿಂಡಿಯನ್ನು ತಿನ್ನಲು ಕೊಡಲಾಯಿತು. ರಾಮಕೃಷ್ಣರು ಹರೀಶನಿಗೆ ನೀರನ್ನು ತರಲು ಹೇಳಿದರು. ಶ್ರೀರಾಮಕೃಷ್ಣರು ಪೂರ್ಣನನ್ನು ಕೋಣೆಯ ಒಂದು ಬದಿಗೆ ಕರೆದುಕೊಂಡು ಹೋಗುತ್ತಾ, ಮಾಸ್ಟರಿಗೆ ಸನ್ನೆ ಮಾಡಿ ರಾಖಾಲನನ್ನು ಅಲ್ಲಿಂದ ಹೊರಗೆ ಕಳುಹಿಸುವಂತೆ ಸೂಚಿಸಿದರು. ತಾವೇ ನೀರಿನ ಲೋಟವನ್ನು ಕೈಯಲ್ಲಿ ಹಿಡಿದು ಪೂರ್ಣನಿಗೆ ಕುಡಿಯಲು ಕೊಟ್ಟರು. ಕೈತೊಳೆಯಲು ಅವನ ಕೈಗಳಿಗೆ ನೀರನ್ನು ಸುರಿದರು.

ಪೂರ್ಣನು ಹೊರಟುಹೋದ ಮೇಲೆ ರಾಮಕೃಷ್ಣರು ಅಂತರ್ಮುಖರಾದರು. ಆಗಾಗ ಅವರ ಮುಖದಲ್ಲಿ ನಗು ಮಿನುಗುತ್ತಿತ್ತು. ದಿಂಬಿಗೆ ಒರಗಿ ಕುಳಿತಿದ್ದವರು ಇದ್ದಕ್ಕಿದ್ದಂತೆ ನಿಶ್ಚಲರಾಗಿ ಸಮಾಧಿಸ್ಥರಾದರು. ಕಣ್ಣೆದುರಿಗಾದ ಈ ಹಠಾತ್ ಪರಿವರ್ತನೆಯನ್ನು ಕೋಣೆಯಲ್ಲಿದ್ದವರೆಲ್ಲ ಕಣ್ಣು ಮಿಟುಕಿಸದೆ ವೀಕ್ಷಿಸುತ್ತಿದ್ದಾರೆ.

ಹೋಮಿಯೋಪಥಿಯ ವೈದ್ಯನಾದ ಡಾ.ಪ್ರತಾಪಚಂದ್ರ ಮಜುಂದಾರ್ ಬಂದಿದ್ದಾರೆ. ರಾಮಕೃಷ್ಣರು ತಮ್ಮ ಗಂಟಲು ನೋವಿನ ವರದಿಯನ್ನು ಆತನಿಗೆ ಕೊಡುತ್ತಿದ್ದಾರೆ.

***ಶ್ರೀರಾಮಕೃಷ್ಣರು*** : "(ಗಂಟಲಿನ) ಹೊರಗೆ ಕೆಳಭಾಗಗಳು ಕುಳಿಬಿದ್ದಂತೆ ತೋರುತ್ತದೆ. ಎಂಜಲು ನುಂಗಿದಾಗ ಗಾಳಿ ಒಳಗೆ ನುಗ್ಗಿ ಹೊರಬಂದಂತಾಗುತ್ತದೆ... ರಾತ್ರಿ ತುಂಬ ಕೆಮ್ಮು.... (ಕೆಮ್ಮಿದಾಗ) ಹರಳೆಣ್ಣೆಯಂಥ ಪದಾರ್ಥ ಬಾಯಿಗೆ ಬರುತ್ತದೆ. (ಉಗಿದಾಗ) ಕೀವಿನಂತೆ ಕಾಣುತ್ತದೆ." ಇಡಿಯ ಶರೀರ ಉರಿಯುತ್ತಿರುವ ಕಷ್ಟವನ್ನು ವಿವರಿಸುತ್ತಾರೆ, —"ಚೂರಿಯಿಂದ ಚುಚ್ಚಿದಂತೆ... ಕುರು ಒಡೆದಾಗ ಆಗುವಂಥ ವೇದನೆ, ಚೆನ್ನಾಗಿ ನೀರು ಹೊಯ್ದು (ಶರೀರವನ್ನು) ತಣ್ಣಗೆ ಮಾಡೋಣ ಅನ್ನಿಸುತ್ತದೆ."


ಶ್ರೀರಾಮಕೃಷ್ಣರು

ಡಾಕ್ಟರ್ ತಮ್ಮ ಔಷಧದ ಪೆಟ್ಟಿಗೆಯನ್ನು ಮಾಸ್ಟರವರ ಕೈಯಲ್ಲಿ ಕೊಟ್ಟು ಅಲ್ಲಿಂದ ಹೊರಡುತ್ತಿದ್ದಾರೆ. ರಾಮಕೃಷ್ಣರು ಡಾಕ್ಟರನ್ನು ಸನ್ನೆ ಮಾಡಿ ಹತ್ತಿರ ಕರೆದರು. ಶ್ರೀರಾಮಕೃಷ್ಣರು: "ನಿನ್ನ ಮೇಲೆ ಭಾರ ಹಾಕಿದ್ದೇನೆ. ನೀನು ಮಾತ್ರ ಸರಿಯಾಗಿ ಬರುತ್ತಿಲ್ಲ." ನಂತರ ತಮ್ಮ ರೋಗದ ವಿಚಾರವಾಗಿ ಡಾಕ್ಟರನ ಅಭಿಪ್ರಾಯವೇನೆಂದು ಕೇಳಿದರು.

***ಡಾ. ಪ್ರತಾಪ*** :"ಅಂಥದೇನೂ ತೊಂದರೆ ಇಲ್ಲ. ವಾಸಿಯಾಗಿ ಬಿಡುತ್ತದೆ."

***ಶ್ರೀರಾಮಕೃಷ್ಣರು*** : "ಇನ್ನೂ ಕೆಂಪಗೇ ಇದೆಯಲ್ಲಾ?"

**ಗುರುವಾರ ೧ನೇ ಅಕ್ಟೋಬರ್ ೧೮೮೫**

ಲೀಲಾಪ್ರಸಂಗದಲ್ಲಿ ಈ ದಿನ ನಡೆದ ಒಂದು ಅಪೂರ್ವ ಘಟನೆಯ ಚಿತ್ರವಿದೆ. ಸ್ವಾಮಿ ಶಾರದಾನಂದರು ಆಗ ವಿದ್ಯಾರ್ಥಿ. ಹೆಸರು ಶರಚ್ಚಂದ್ರ. ಅವರು ಓದುತ್ತಿದ್ದ ಸಂತ ಜೇವಿಯರ್ ಕಾಲೇಜ್ ಗುರುವಾರ ಹಾಗೂ ಭಾನುವಾರ ಮುಚ್ಚಿರುತ್ತಿತ್ತು. ಆ ದಿನಗಳಲ್ಲಿ ಶರಚ್ಚಂದ್ರ ರಾಮಕೃಷ್ಣರನ್ನು ಕಾಣಲು ಹೋಗುತ್ತಿದ್ದನು. ಈ ಗುರುವಾರ ಆತ ಬಲರಾಮನ ಮನೆಗೆ ಬಂದಾಗ ಒಂದು ಆಕರ್ಷಣೀಯ ಘಟನೆಯ ಸಾಕ್ಷಿಯಾಗುವ ಸೌಭಾಗ್ಯ ಆತನದಾಯಿತು. ಆ ದಿನ ಸಂಜೆ ಬಲರಾಮನ ಮನೆಯ ಎರಡನೇ ಅಂತಸ್ತಿನ ಶ್ರೀರಾಮಕೃಷ್ಣರ

ಕೋಣೆಯ ಬಳಿ ಹೋಗಿ ಆತ ನೋಡುತ್ತಾನೆ, ಪಕ್ಕದ ದೊಡ್ಡ ಹಾಲ್ ಜನರಿಂದ ತುಂಬಿಹೋಗಿದೆ. ಅಲ್ಲಿ ಗಿರೀಶ್‌ಚಂದ್ರ ಹಾಗೂ ಆತನ ಸ್ನೇಹಿತ ಕಾಳಿಪದ ಇಬ್ಬರೂ ಹಾಡುತ್ತಿದ್ದಾರೆ. ಶ್ರೀಚೈತನ್ಯದೇವನ ಕೃಷ್ಣಪ್ರೇಮದ ಭಾವ ತುಂಬಿದ ಹಾಡದು. ಕೃಷ್ಣಪ್ರೇಮದಲ್ಲಿ ಉನ್ಮತ್ತನಾಗಿ ಆತ ಹೇಳುತ್ತಿದ್ದಾನೆ : "ನಿತಾಯಿ, ನನ್ನನ್ನು ಹಿಡಿದುಕೋ, ನನ್ನ ಅಂತರಂಗ ಕಲಕಿ ಹೋಗಿದೆ..."

ಆ ಕೋಣೆಯ ಪಶ್ಚಿಮ ದಿಕ್ಕಿನಲ್ಲಿ ಶ್ರೀರಾಮಕೃಷ್ಣರು ಕುಳಿತು ಕೊಂಡಿದ್ದಾರೆ. ಗಂಭೀರ ಸಮಾಧಿಯಲ್ಲಿ ಮುಳುಗಿಹೋಗಿದ್ದಾರೆ. ಅದೆಂಥ ಪ್ರಸನ್ನತೆ ಹಾಗೂ ಆನಂದದ ಅಲೌಕಿಕವಾದ ದಿವ್ಯ ಭಾವ ಅಲ್ಲಿ ತೀವ್ರವಾಗಿ ಅನುಭವಕ್ಕೆ ಬರುತ್ತಿದೆ! ಈ ಕಡೆ ಹಾಡು ಮುಂದುವರೆಯುತ್ತಿದೆ.

ಹಾಡು ನಿಂತಮೇಲೆ ಶ್ರೀರಾಮಕೃಷ್ಣರ ಮನಸ್ಸು ನಿಧಾನವಾಗಿ ಬಾಹ್ಯಜಗತ್ತಿಗೆ ಪ್ರವೇಶಿಸುತ್ತಿದೆ. ಅವರು ತಮ್ಮೆದುರು ಕುಳಿತಿದ್ದ ವ್ಯಕ್ತಿಗೆ ಹೇಳುತ್ತಿದ್ದಾರೆ "ಈಗ ಹೇಳು ಶ್ರೀಕೃಷ್ಣ ಚೈತನ್ಯ - ಹೇಳು ಶ್ರೀಕೃಷ್ಣಚೈತನ್ಯ - ಹೇಳು ಶ್ರೀಕೃಷ್ಣಚೈತನ್ಯ." ಹೀಗೆ ಮೂರು ಸಲ ಅವನಿಂದ ಈ ಹೆಸರನ್ನು ಹೇಳಿಸಿದ ಮೇಲೆ ಅವರು ಪೂರ್ತಿಯಾಗಿ ಹೊರಪ್ರಪಂಚದ ಅನುಭವ ಗಳಿಗೆ ಜಾಗೃತರಾದರು. ಹಾಗೂ ಅಲ್ಲಿ ನೆರೆದಿದ್ದ ಜನ ಗಳೊಂದಿಗೆ ಸ್ವಾಭಾವಿಕವಾಗಿ ಮಾತನಾಡಲಾರಂಭಿಸಿದರು.

ಆ ದಿನ ಅವರ ಕೃಪೆಗೆ ಒಳಗಾಗಿದ್ದ ವ್ಯಕ್ತಿ ನಿತ್ಯಗೋಪಾಲ ಗೋಸ್ವಾಮಿ. ಪೂರ್ವ ಬಂಗಾಳದ (ಈಗಿನ ಬಾಂಗ್ಲಾದೇಶ್) ಢಾಕಾದ ಜಗನ್ನಾಥ ಕಾಲೇಜಿನ ಅಧ್ಯಾಪಕ. ಈತನ ತಂದೆ ಕೃಷ್ಣ ಗೋಪಾಲ ಗೋಸ್ವಾಮಿ. ಪೂರ್ವಬಂಗಾಳದಲ್ಲಿ ಹೆಸರುವಾಸಿ ಯಾದ ವ್ಯಕ್ತಿ. ಈತನಿಂದಲೇ ಅಲ್ಲಿ ವೈಷ್ಣವ ಧರ್ಮವು ಪ್ರಬಲವಾಗಿತ್ತು. ನಿತ್ಯಗೋಪಾಲನದು ಸ್ವಾಭಾವಿಕವಾಗಿಯೇ ಧರ್ಮಪರಾಯಣ, ಅಂತರ್ಮುಖ ವ್ಯಕ್ತಿತ್ವ. ಆತ ಮೊದಲು ಬ್ರಹ್ಮಸಮಾಜದ ಸದಸ್ಯನಾಗಿದ್ದವನು ಕೆಲವು ಕಾಲ ಥಿಯಾಸಫಿ ಯಿಂದಲೂ ಆಕರ್ಷಿತನಾಗಿದ್ದನು. ಮಧ್ಯದಲ್ಲೊಮ್ಮೆ ಒಂದು ನಾಸ್ತಿಕರ ಗುಂಪಿನಲ್ಲಿಯೂ ಸೇರಿಕೊಂಡಿದ್ದನು. ಆದರೆ ಅವನ ಅದೃಷ್ಟ ಚೆನ್ನಾಗಿತ್ತು. ವಿಜಯಕೃಷ್ಣ ಗೋಸ್ವಾಮಿ ಈತನನ್ನು ಶ್ರೀರಾಮಕೃಷ್ಣರ ಬಳಿ ಕರೆತಂದನು. ಈ ಪ್ರಥಮ ಭೇಟಿ ೧೮೮೪ರ ಮಧ್ಯಭಾಗದಲ್ಲಾಯಿತು. ಶ್ರೀರಾಮಕೃಷ್ಣರ ಗಂಟಲ ಕ್ಯಾನ್ಸರಿನ ವಿಚಾರ ತಿಳಿದು ಈಗ ಆತ ಅವರನ್ನು ನೋಡಲು ಧಾವಿಸಿ ಬಂದಿದ್ದಾನೆ—ಸುದೂರ ಢಾಕಾದಿಂದ ಕಲ್ಕತ್ತೆಗೆ.

ಈ ದಿನವೇ ನಡೆಯಿತು ಮತ್ತೊಂದು ಸ್ಮರಣೀಯ ಘಟನೆ. ಆ ದಿನ ಸಂಜೆ ೫.೩೦ ಎಂದಿನಂತೆ ಸ್ಕೂಲಿನಿಂದ ಹೊರಟು ಮನೆಗೆ ತಿಂಡಿ ತಿನ್ನಲೂ ಹೋಗದೆ ನೇರವಾಗಿ ಬಲರಾಮನ ಮನೆಗೆ ಬಂದಿದ್ದಾರೆ ಮಾಸ್ಟರ್ ಮಹಾಶಯರು. ಆಗ ಸಣ್ಣಗೆ ಮಳೆ ಬೀಳುತ್ತಿತ್ತು. ಡಾ.ಪ್ರತಾಪ ಮಜುಂದಾರ್ ಅಲ್ಲಿಗೆ ಆ ದಿನ ಬರಲಾಗಲಿಲ್ಲ. ಹೀಗಾಗಿ ರಾಮಕೃಷ್ಣರ ಆ ದಿನದ ಶಾರೀರಿಕ ಪರಿಸ್ಥಿತಿಯನ್ನು ಕುರಿತು ಆತನಿಗೆ ಬರೆದು ಕಳುಹಿಸುವ ವ್ಯವಸ್ಥೆಯಾಯಿತು.

ಪ್ರಸಿದ್ಧ ಪಂಡಿತ ಶಶಧರ ತರ್ಕಚೂಡಾಮಣಿ ಆ ದಿನ ಸಂಜೆ ಸುಮಾರು ೭ ಗಂಟೆಗೆ ಬಲರಾಮನ ಮನೆಗೆ ಆಗಮಿಸಿ ದನು. ಶಶಧರ ತರ್ಕಚೂಡಾಮಣಿ ಆಗಿನ ಕಾಲದ ಹೆಸರುವಾಸಿ ಯಾದ ಪಂಡಿತ, ಆಧ್ಯಾತ್ಮಿಕ ಸಾಧಕ ಹಾಗೂ ಹಿಂದೂಧರ್ಮ ಪ್ರಚಾರಕನಾಗಿದ್ದನು. ಶ್ರೀರಾಮಕೃಷ್ಣರು ೧೮೮೪ನೇ ಜೂನ್ ೨೫ರಂದು ಮೊದಲ ಬಾರಿ ಪಂಡಿತನ್ನು ಭೇಟಿ ಮಾಡಿದ್ದರು. ತರ್ಕಚೂಡಾಮಣಿಯೂ ಕೆಲವು ಸಲ ತಾನೇ ಹೋಗಿ ಅವರನ್ನು ಕಂಡು ಮಾತನಾಡಿಸಿದ್ದನು. ಅವರು ಈಗ ಕಾಯಿಲೆಯಿಂದ ಕಷ್ಟ ಪಡುತ್ತಿರುವುದನ್ನು ಕೇಳಿ ಅವರನ್ನು ನೋಡಲೆಂದು ಆತ ಬಂದಿದ್ದಾನೆ.

ಶ್ರೀರಾಮಕೃಷ್ಣರಿಗೆ ಪಂಡಿತನನ್ನು ನೋಡಿ ಆನಂದವಾಯಿತು. ಆತ ಅವರು ಪಡುತ್ತಿರುವ ಕಷ್ಟವನ್ನು ಕಂಡು ದುಃಖ ವ್ಯಕ್ತಪಡಿಸುತ್ತಾ ಅವರ ಆರೋಗ್ಯದ ಬಗ್ಗೆ ವಿಚಾರಿಸಿದನು. ಆಗ ಅವರು ನಕ್ಕು ತಮಾಷೆಯಾಗಿ ಹೇಳಿದರು, "ಈ ಶರೀರದ ರೋಗ ಹೇಗೆ ಗೊತ್ತೆ? ಪುರೋಹಿತ (ದಕ್ಷಿಣೆಗಾಗಿ) ಹಿಂದೆ ಬಿದ್ದಂತೆ..." ಮತ್ತೂ ಹೇಳಿದರು "ದೊಡ್ಡ ಹಳ್ಳದಲ್ಲಿ ಎಷ್ಟು ಬೇಕಾದರೂ ತುಂಬಬಹುದು. ಆದರೆ ಈ (ದುರ್ಬಲ) ಶರೀರ ಇನ್ನೂ (ಕಾಯಿಲೆಯನ್ನು) ತುಂಬಿದರೆ ತಡೆಯಲಾರದು." ನಂತರ ಒಂದು ಸಣ್ಣ ಕಥೆಯನ್ನು ಹೇಳಿದರು, "ಒಂದು ಆಶ್ರಮದ ಸಂನ್ಯಾಸಿ ದುಷ್ಟಜನರ ಕೈಯಲ್ಲಿ ಪೆಟ್ಟು ತಿಂದು ಪ್ರಜ್ಞೆ ಕಳೆದು ಕೊಂಡು ಬಿದ್ದನು. ಆತನನ್ನು ಉಳಿದ ಸಂನ್ಯಾಸಿಗಳು ಶುಶ್ರೂಷೆ ಮಾಡಿ, ಆತ ಕಣ್ಣು ತೆರೆದಾಗ ಪ್ರಶ್ನಿಸಿದರು, "ಸ್ವಾಮೀಜಿ, ಹೇಳಿ ನೋಡೋಣ, ನಿಮ್ಮ ಬಾಯಿಗೆ ಯಾರು ಹಾಲು ಹಾಕು ತ್ತಿದ್ದಾರೆ?" ಹೊಡೆತ ತಿಂದ ಸಂನ್ಯಾಸಿ ನಿಧಾನವಾಗಿ ಹೇಳಿದನು, "ಯಾರ ಕೈಯಿಂದ ಪೆಟ್ಟು ತಿಂದೆನೋ ಅದೇ ಕೈ ಈಗ ಹಾಲು ಕುಡಿಸುತ್ತಿದೆ" ಎಂದು. ಸುಖದುಃಖಗಳೆರಡೂ ಭಗವಂತನ ಲೀಲೆ ಎಂದು ಅವರು ತಮ್ಮ ಮಾತುಗಳಿಂದ ಸೂಚಿಸುತ್ತಿದ್ದಾರೆ.

ತರ್ಕಚೂಡಾಮಣಿ ರಸಿಕ ಪುರುಷ. ಆತ ರಾಮಕೃಷ್ಣರಿಗೆ ಮರುತ್ತರ ಕೊಡುತ್ತಾನೆ : "ಸರಿ ನೀವು ಸಮಾಧಿಸ್ಥರಾಗಿ ಕುಳಿತು ಕೊಳ್ಳಿ, ನಾನು ಮಂತ್ರ ಹಾಕುತ್ತೇನೆ (ಕಾಯಿಲೆ ವಾಸಿಯಾಗಲು). ನೀವು ದೇಶವನ್ನು ಸುತ್ತಿಬರುತ್ತೇನೆನ್ನಿ" (ಮನಸ್ಸಿನಲ್ಲಿ ಈ ರೀತಿ ಏನಾದರೂ ಆಸೆ ಇಟ್ಟುಕೊಂಡರೆ ಶರೀರವನ್ನು ಉಳಿಸುವ ಪ್ರಯತ್ನ ಮಾಡಬಹುದೆಂದು ಸೂಚಿಸುತ್ತಾನೆ.)

ಶಶಧರನ ಮಾತುಗಳಿಗೆ ಆ ದಿನ ಶ್ರೀರಾಮಕೃಷ್ಣರು ಏನು ಪ್ರತಿಕ್ರಿಯೆ ತೋರಿಸಿದರೆಂದು ನಮಗೆ ತಿಳಿದುಬಂದಿಲ್ಲ. ಆತ ರಾಮಕೃಷ್ಣರಿಂದ ಬೀಳ್ಕೊಂಡು ಹೊರಗಿನ ವರಾಂಡಕ್ಕೆ ಹೋಗಿ

ಅಲ್ಲಿ ನೆರೆದಿದ್ದ ಭಕ್ತರೊಡನೆ ಮಾತುಕತೆಗಳನ್ನಾಡಿ ಅಲ್ಲಿಂದ ನಿರ್ಗಮಿಸಿದನು.

ಆ ರಾತ್ರಿ ಮಾಸ್ಟರ್ ಬಲರಾಮನ ಮನೆಯಲ್ಲಿಯೇ ಮಲಗಿಕೊಂಡರು. ರಾಮಕೃಷ್ಣರ ಗಂಟಲ ನೋವು ಆ ರಾತ್ರಿ ತೀವ್ರವಾಗಿ ಉಲ್ಬಣಿಸಿತು. ರಾತ್ರಿ ೩.೩೦ರಲ್ಲಿ ನಿದ್ದೆ ಬರದೆ ಚಡಪಡಿಸುತ್ತಿದ್ದ ಅವರಿಗೆ ಗಾಳಿಬೀಸಲೆಂದು ಮಾಸ್ಟರ್ ಬೀಸಣಿಗೆಯನ್ನು ತೆಗೆದುಕೊಂಡು ಅವರ ಸಮೀಪಕ್ಕೆ ಹೋದರು.

**ಶ್ರೀರಾಮಕೃಷ್ಣರು** : "ಗಾಳಿ ಬೀಸುತ್ತೀಯಾ? ಏನು ಪ್ರಯೋಜನ? ಅತ್ಯಂತ ಕಷ್ಟ, ಸಹಿಸಲಾಗುತ್ತಿಲ್ಲ." ತಮ್ಮ ಸೇವಕ ಹರೀಶನಿಗೆ ಹೇಳಿದರು, "ಇಡೀ ರಾತ್ರಿ ನಿದ್ದೆ ಬರಲಿಲ್ಲ" ಎಂದು. ನಂತರ ಮಾಸ್ಟರತ್ತ ನಿಟ್ಟಿಸಿ ನೋಡಿ ಉದ್ಗರಿಸಿದರು, "ಯಾರಿದು? ಮಹೇಂದರ್! ಇನ್ನು (ಇದನ್ನು) ಉಳಿಸಿಕೊಳ್ಳಲು ಸಾಧ್ಯವಿಲ್ಲ..."

ಮಾಸ್ಟರ್ ಮೌನವಾಗಿ ಶ್ರೀರಾಮಕೃಷ್ಣರ ಕಾಲುಗಳನ್ನು ಒತ್ತಲಾರಂಭಿಸಿದರು. ಹರೀಶ ನಿಧಾನವಾಗಿ ಬೀಸಣಿಗೆಯಿಂದ ಗಾಳಿ ಬೀಸುತ್ತಿದ್ದಾನೆ. ಮಾಸ್ಟರ್ ಬೆಳಗಿನ ಜಾವ ೪.೩೦ಕ್ಕೇ ಬಲರಾಮನ ಮನೆಯಿಂದ ಹೊರಟು ಗಂಗೆಯಲ್ಲಿ ಸ್ನಾನಮಾಡಿ ಸುಮಾರು ಬೆಳಿಗ್ಗೆ ೬ ಗಂಟೆಗೆ ಮತ್ತೆ ರಾಮಕೃಷ್ಣರ ಕೋಣೆಯನ್ನು ಪ್ರವೇಶಿಸಿ ನೋಡುತ್ತಾರೆ ಶ್ರೀರಾಮಕೃಷ್ಣರು ನಿದ್ರಿಸುತ್ತಿದ್ದಾರೆ.

**ಶುಕ್ರವಾರ ೨ನೇ ಅಕ್ಟೋಬರ್ ೧೮೮೫**

ಮಾಸ್ಟರ್ ಸ್ಕೂಲಿಗೆ ಹೋಗಲು ಹೊರಟು ನಿಂತಿದ್ದಾರೆ. ಮಾಸ್ಟರ್ ಸ್ಕೂಲಿಗೆ ಹೋದನಂತರ ಆ ದಿನ ಮತ್ತೆ ಶಶಧರ ತರ್ಕಚೂಡಾಮಣಿಯ ಆಗಮನವಾಯಿತು. ಆತ ಶ್ರೀರಾಮಕೃಷ್ಣರಿಗೆ ಅವರ ಕಾಯಿಲೆಯಿಂದ ಮುಕ್ತರಾಗಲು ಒಂದು ಉಪಾಯವನ್ನು ಹೇಳಿದ್ದನು. ಅವನ ಪ್ರಕಾರ ಅವರು ಆರೋಗ್ಯಲಾಭದ ಅಭಿಲಾಷೆಯಿಂದ ಎರಡು ಗಂಟೆಗಳ ಕಾಲ ಮನಸ್ಸನ್ನು ಸಮಾಧಿಯಲ್ಲಿ ಏಕಾಗ್ರಗೊಳಿಸಿದರೆ ರೋಗ ವಾಸಿಯಾಗಿಬಿಡುತ್ತದೆ. ರಾಮಕೃಷ್ಣರು ಪಂಡಿತನಿಗೆ ತಮ್ಮ ಮಾನಸಿಕ ಅವಸ್ಥೆಯನ್ನು ಅರ್ಥಮಾಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆತನ ರೋಗನಿವಾರಣೆಯ ಸಲಹೆಯ ವಿಚಾರವನ್ನೆತ್ತಿ ಹೇಳುತ್ತಾರೆ : "ನೀನು ಹೇಳಿದಂತೆ ಮಾಡಲು ಯೋಚಿಸಿದೆ. ಆದರೆ ಮನಸ್ಸು ಆ ಕಡೆ ಹೋಗುತ್ತಿಲ್ಲ. ಶರೀರವನ್ನು ಕುರಿತು ಚಿಂತಿಸಲು ಯತ್ನಿಸಿದರೆ ಸಾಕು (ಶರೀರ) ಟೊಳ್ಳುಬಿದ್ದಂತೆ ಖಾಲಿ ಎನ್ನಿಸುತ್ತದೆ.. ಬರಿ ಕವಚ ಮಾತ್ರ." ರಾಮಕೃಷ್ಣರ ಈ ಮಾತುಗಳ ಮರ್ಮ ಶಶಧರ ತರ್ಕಚೂಡಾಮಣಿಗೆ ಅರ್ಥವಾಯಿತು ಎನ್ನಿಸುವುದಿಲ್ಲ. ಆತ ತನ್ನ ವೃದ್ಧಾಪ್ಯದಲ್ಲಿ, ೧೮೯೦ರ ಜನವರಿ ತಿಂಗಳಲ್ಲಿ ಒಂದು ಪತ್ರದಲ್ಲಿ ರಾಮಕೃಷ್ಣರ ವಿಚಾರವಾಗಿ ಹೀಗೆ ಬರೆದಿದ್ದಾನೆ: "ಅವರು (ರಾಮಕೃಷ್ಣರು) ಶರೀರತ್ಯಾಗ ಮಾಡುವ ಮೊದಲು ೫-೬ ತಿಂಗಳು ಗಂಟಲಿನ (ಕ್ಯಾನ್ಸರ್) ರೋಗದಿಂದ ಕಷ್ಟಪಡುತ್ತಿದ್ದರು. ಮನಸ್ಸನ್ನು ಮೇಲೆತ್ತಿ ಮನೋಮಯ ಕೋಶದಲ್ಲಿ ನಿಲ್ಲಿಸಲು ಸಾಧ್ಯವಾಗಿದ್ದರೆ ಅವರು ಈ ಕಷ್ಟದಿಂದ ಪಾರಾಗಬಹುದಿತ್ತು. ಈ ಸಮಯದಲ್ಲಿಯೇ ನಾನೊಮ್ಮೆ ಅವರನ್ನು ಕಾಣಲು ಹೋಗಿದ್ದೆ. ಅವರಿಗೆ ಈ ನೋವಿನಿಂದ ಮುಕ್ತರಾಗುವ ಉಪಾಯವನ್ನೂ ಹೇಳಿಕೊಟ್ಟೆ. ಇದಕ್ಕೆ ಅವರೆಂದರು, 'ನನ್ನ ಮನಸ್ಸನ್ನು ಏಕಾಗ್ರ ಮಾಡುವ ಪ್ರಯತ್ನ ಮಾಡಿದರೆ ಸಾಕು ಅದು ನನ್ನ ಇಷ್ಟದೇವತೆಯ ಕಡೆಗೇ ಹೋಗುತ್ತದೆ. ಹೀಗಾಗಿ ನೀನು ಹೇಳಿದಂತೆ (ಸಮಾಧಿಯಲ್ಲಿ ಶರೀರದ ಆರೋಗ್ಯಕ್ಕೆ ಪ್ರಯತ್ನ) ಮಾಡಲು ನನಗೆ ಸಾಧ್ಯವಿಲ್ಲ.' ಅವರಿಗೆ ಯೋಗಶಕ್ತಿಯಿಂದ ಮನಸ್ಸನ್ನು ಅನ್ನಮಯ ಕೋಶದಿಂದ ಮನೋಮಯ ಕೋಶಕ್ಕೆ ಎತ್ತಲು ಸಾಧ್ಯವಾಗಲಿ ಬಿಡಲಿ, ಅವರು ಒಬ್ಬ ಸಂತ ಮಹಾಪುರುಷರಾಗಿದ್ದರು ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಶರೀರತ್ಯಾಗದ ಸ್ವಲ್ಪ ಕಾಲದ ಮೊದಲು ಅವರು ಸ್ವಲ್ಪ ಮಾನಸಿಕವಾಗಿ ಕುಗ್ಗಿಹೋಗಿದ್ದರು ಎಂದು ನನಗನ್ನಿಸಿತ್ತು."

ರಾಮಕೃಷ್ಣರು ಹೊಸಬಾಡಿಗೆಯ ಮನೆಗೆ ಹೊರಡುವ ದಿನವನ್ನು ಗೊತ್ತುಮಾಡಲಾಯಿತು. ಶ್ರೀರಾಮಕೃಷ್ಣರು ಬಲರಾಮನ ಭವನದಿಂದ ಕೊನೆಯ ವಿದಾಯ ಹೇಳಿ, ೫೫, ಶ್ಯಾಮಪುಕುರ ಸ್ಟ್ರೀಟಿನ ಒಂದು ಬಾಡಿಗೆಯ ಮನೆಗೆ ಹೊರಡಲಿದ್ದಾರೆ.

ಈ ಏಳು ದಿನಗಳ ಅವರ ಜೀವನವನ್ನು ಗಮನಿಸಿದಾಗ ಕೆಲವು ಮುಖ್ಯವಿಷಯಗಳು ಗೋಚರವಾಗುತ್ತವೆ. ಆಯುರ್ವೇದದ ವೈದ್ಯರು ಅವರ ಕಾಯಿಲೆಯನ್ನು ಪರೀಕ್ಷಿಸಿ ಅವರದ್ದು ಗುಣಪಡಿಸಲಾಗದಂತಹ 'ರೋಹಿಣಿ' (ಕ್ಯಾನ್ಸರ್) ವ್ಯಾಧಿ ಎಂಬ ನಿರ್ಧಾರಕ್ಕೆ ಬಂದರು. ಇನ್ನೊಂದು ಕಡೆಯಲ್ಲಿ ನೋಡುತ್ತೇವೆ ಶರೀರಭಾವದಿಂದ ಮುಕ್ತರಾದ ಶ್ರೀರಾಮಕೃಷ್ಣರ ಆ ಏಳುದಿನಗಳ ಜೀವನದ ಅಪರೂಪ ಭಾವಮಾಧುರ್ಯದಿಂದ ಕೂಡಿದ ಲೀಲೆ. ಜಗತ್ತಿಗೆ ಒಂದು ಉದಾಹರಣೆಯಂತೆ ಚಿರಸ್ಥಾಯಿಯಾಗಿದೆ ಆ ಜೀವನ. ಪರಿಚಿತ ಹಾಗೂ ಅಪರಿಚಿತ, ವಿಭಿನ್ನ ರೀತಿಯ ಜನರ ಸಮಾಗಮದಿಂದ ಶ್ರೀರಾಮಕೃಷ್ಣರಿದ್ದ ಆ ಕೊನೆಯ ಏಳು ದಿನಗಳಲ್ಲಿ ಬಲರಾಮನ ಮನೆ ಒಂದು ಆನಂದಮಯ ಉತ್ಸವಮಂಟಪವಾಗಿ ಮಾರ್ಪಾಡಾಯಿತು. ಈ ಸಮಯದಲ್ಲಿ ಅವರೊಳಗೆ ಅಡಗಿದ್ದ ದೈವೀಶಕ್ತಿಯು ವಿಶೇಷವಾಗಿ ಬಹಿರ್‌ಪ್ರಕಾಶಿತವಾಗಿ ಬಹುಜನರ ದೃಷ್ಟಿಯನ್ನು ಆಕರ್ಷಿಸಿತ್ತು. ಜಗತ್ತಿನ ಹಿತದಲ್ಲಿ ನಿರತರಾದ ಶ್ರೀರಾಮಕೃಷ್ಣರು ತಮ್ಮ ಶರೀರ ಹಾಗೂ ಶರೀರದ ಕಠಿಣ ವ್ಯಾಧಿಯನ್ನು ತುಚ್ಛವಾಗಿ ಪರಿಗಣಿಸಿ ಜಗತ್ತಿನ ಕಲ್ಯಾಣಕ್ಕಾಗಿ ಆತ್ಮಾಹುತಿ ಕೊಟ್ಟರು. ಯೋಗದೃಷ್ಟಿಯಲ್ಲಿ ಅವರು ಪ್ರತ್ಯಕ್ಷವಾಗಿ ಕಂಡಿದ್ದರು ಈ ಶರೀರ ಟೊಳ್ಳು ಬಿದ್ದಂತೆ—ಹೊರಗಿನ ಒಂದು ಆವರಣ ಮಾತ್ರ ಎಂದು. ಹೀಗಾಗಿ ಈ ಕೊನೆಯ ದಿನಗಳಲ್ಲಿ ಮನುಷ್ಯರ ಅಧೋಮುಖ ಚೈತನ್ಯವನ್ನು ಊರ್ಧ್ವಗಾಮಿಯನ್ನಾಗಿ ಮಾಡಲು ತಮ್ಮ ಜೀವನವನ್ನು ಸಮರ್ಪಿಸಿದರು.(ಮುಂದುವರೆಯುವುದು)